21	ಹಾವೇರಿ	79	33	46
22	ಉತ್ತರ ಕನ್ನಡ	96	19	77
23	ಗುಲ್ಬರ್ಗಾ	177	39	138
24	ಬಳ್ಳಾರಿ	102	29	73
25	ಬೀದರ್	91	62	29
26	ರಾಯಚೂರು	74	15	59
27	ಕೊಪ್ಪಳ	60	24	36
28	ರಾಮನಗರ	59	45	14
29	ಚಿಕ್ಕಬಳ್ಳಾಪುರ	59	48	11
	ಒಟ್ಟು:	**2397**	**1309**	**1088**

ಷರಾ:–ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ 84 ನಿವೃತ್ತ ಪಶುವೈದ್ಯರನ್ನು 2 ವರ್ಷಗಳ ಅವಧಿಗೆ ನೇಮಕಾತಿ ಮಾಡಿದೆ

ಕರ್ನಾಟಕ ವಿಧಾನ ಸಭೆ

302

ಶ್ರೀ ಬಚ್ಚೇಗೌಡ ಕೆ.ಪಿ (ಚಿಕ್ಕಬಳ್ಳಾಪುರ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಅ) ಚಿಕ್ಕಬಳ್ಳಾಪುರ ನಗರ ಜಿಲ್ಲಾ ಕೇಂದ್ರವಾಗಿದ್ದು, ಪ್ರತ್ಯೇಕ ಬಾಲಕಿಯರ ಪದವಿ ಪೂರ್ವ ಕಾಲೇಜನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಪ್ರಸ್ತಾವನೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಯುಕ್ತರ ಪರಿಶೀಲನೆಯಲ್ಲಿದೆ.

ಇ). ಹಾಗಿದ್ದಲ್ಲಿ, ಈಗಿರುವ ಕಾಲೇಜಿನ ಆವರಣದಲ್ಲಿ ಹೊಸ ಕೊಠಡಿಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳವುದೇ;

ಇಲ್ಲ.

ಈ). ಹಾಗಿದ್ದಲ್ಲಿ, ಈ ಕೊಠಡಿಗಳನ್ನು ನಿರ್ಮಿಸಲು ಈ ವರ್ಷದಿಂದ ಅನುದಾನವನ್ನು ಬಿಡುಗಡೆ ಮಾಡುವುದೇ;

ಉ) ಹಾಗಿದ್ದಲ್ಲಿ, ಬಿಡುಗಡೆ ಮಾಡುವ ಅನುದಾನದ ಪ್ರಮಾಣ ಎಷ್ಟು, ವಿವರಗಳನ್ನು ನೀಡುವದು?

ಉದ್ಭವಿಸುವುದಿಲ್ಲ.

ಸಂಖ್ಯೆ:ಇಡಿ 18 ಎಸ್‌ಹೆಚ್‌ಹೆಚ್ 2009

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.

ಕರ್ನಾಟಕ ವಿಧಾನ ಸಭೆ

303 ಶ್ರೀ ಬಾಲಕೃಷ್ಣ ಹೆಚ್.ಸಿ[ಮಾಗಡಿ]

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು:

ಅ. ರಾಜ್ಯದಲ್ಲಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಡಫ್-12ರ ಅನುದಾನದಿಂದ ಪೂರ್ಣಗೊಂಡಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡಗಳೆಷ್ಟು; ಅಪೂರ್ಣಗೊಂಡಿರುವ ಕಾಲೇಜುಗಳ ಕಟ್ಟಡಗಳೆಷ್ಟು ಹಾಗೂ ಪ್ರಾರಂಭಿಸದಿರುವ ಕಟ್ಟಡಗಳೆಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು.

ರಾಜ್ಯದಲ್ಲಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್-12 ರ ಅನುದಾನದಲ್ಲಿ

ಮಂಜೂರಾಗಿರುವುದು	ಪೂರ್ಣಗೊಂಡಿರುವುದು	ಅಪೂರ್ಣಗೊಂಡಿರುವುದು	ಪ್ರಾರಂಭಿಸದೇ ಇರುವುದು
404	47	322	35

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ.

ಆ. ರಾಜ್ಯದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಟ್ಟಡವನ್ನು ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್-12 ರಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದರೂ ಹಣವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಹಣವನ್ನು ಬಿಡುಗಡೆ ಮಾಡದಿರುವದಕ್ಕೆ ಕಾರಣವೇನು?

ಬಂದಿದೆ.

2008-09ನೇ ಸಾಲಿಗೆ ನಬಾರ್ಡ್ ಯೋಜನೆಯ ಕಾಮಗಾರಿಗಳಿಗೆ 63.00ಕೋಟಿರೂಗಳನ್ನು ಒದಗಿಸಿದ್ದು, ಅದರಲ್ಲಿ ಆರ್ಥಿಕ ಇಲಾಖೆಯ ಸೂಚನೆಯನ್ವಯ ಶೇ.50 ರಷ್ಟು ಹಣವನ್ನು ಎಂದರೆ 31.50ಕೋಟಿರೂಗಳನ್ನು ಬಿಡುಗಡೆ ಮಾಡಲಾಗಿದೆ. ಉಳಿದೆ ಶೇ.50 ರಷ್ಟು ಅನುದಾನ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ಇ. ಈಗಾಗಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ಬಿಲ್ಲುಗಳು ಬಾಕಿ ಇರುವುದು ನಿಜವೇ; ಹಾಗಿದ್ದಲ್ಲಿ, ಪಾವತಿಸಬೇಕಾದ ಹಣವೆಷ್ಟು; ಗುತ್ತಿಗೆದಾರರಿಗೆ ಪಾವತಿಸಲು ಅನುಸರಿಸುವ ಮಾನದಂಡವೇನು;[ಜಿಲ್ಲಾವರು ಮಾಹಿತಿ ನೀಡುವುದು];

ನಿಜ.

ಈ ಯೋಜನೆಯ ಒಟ್ಟು ಮೊತ್ತ 60.04 ಕೋಟಿರೂಗಳಲ್ಲಿ ಇದುವರೆವಿಗೂ 27.44ಕೋಟಿರೂಗಳು ಖರ್ಚಾಗಿದ್ದು, ಅಕ್ಟೋಬರ್-08ರವರೆಗೆ 4.50ಕೋಟಿರೂಗಳನ್ನು ನಬಾರ್ಡ್ ನಿಂದ ಮರುಪಾವತಿ ಪಡೆಯಲಾಗಿದ್ದು, ಇನ್ನೂ